**ಓ.ಎಸ್. ನಂಃ 44/2022**

**ಡಿ. ಡಬ್ಲ್ಯೂಃ 1**

**ದಿನಾಂಕ 06.11.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಬಿ.ಎಸ್.ಎಂ. ಎಲ್‌ವಕೀಲರಿಂದಃ**

1. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಂದೆ-ತಾಯಿಗೆ ನಾವು ಒಟ್ಟು 6 ಜನ ಮಕ್ಕಳು. ಅವರ ಹೆಸರು 1 ನೇ ಪ್ರತಿವಾದಿಯಾದ ತಮ್ಮೇಗೌಡ, 2 ನೇ ಪ್ರತಿವಾದಿಯಾದ ಮಹದೇವ, ಸುರೇಶನಾದ ನಾನು, ಲಕ್ಷ್ಮಮ್ಮ, ಭಾರತಮ್ಮ ಮತ್ತು ಮಹದೇವಮ್ಮ ಅಂತ ಇರುತ್ತದೆ. 2000 ನೇ ಇಸವಿಯಲ್ಲಿ ನಮಗೆ ಹಣಕಾಸಿನ ತೊಂದರೆ ಇದ್ದ ಕಾರಣ ತೀರ ಬಡತನವಿತ್ತು ಎಂದರೆ ಸರಿ. ದಿನಾಂಕ 08.05.2000 ರಂದು ನನ್ನ ತಂಗಿಯಾದ ಮಹದೇವಮ್ಮ ರವರ ವಿವಾಹವನ್ನು ಮಾಡಿಸಿರುತ್ತೇವೆ ಎಂದರೆ ಸರಿ. ನನ್ನ ತಂಗಿಯಾದ ಮಹದೇವಮ್ಮ ರವರ ವಿವಾಹದ ಖರ್ಚಿಗಾಗಿ ಹಣದ ಅಗತ್ಯ ಇದ್ದ ಕಾರಣ 1 ರಿಂದ 3 ನೇ ಪ್ರತಿವಾದಿಯರು ಮತ್ತು ತಂದೆಯಾದ ರಾಮೇಗೌಡ ಸೇರಿ ದಿನಾಂಕ 08.05.2000 ರಂದು ದಾವಾ ಆಸ್ತಿಯನ್ನು ವಾದಿಯರಿಗೆ ನಾವು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ವಾದಿಯರಿಂದ ಕೇವಲ 22,000/- ರೂಪಾಯಿ ಸಾಲವನ್ನು ಮಾತ್ರ ಪಡೆದಿದ್ದು, ಸದರಿ ಸಾಲದ ಭದ್ರತೆಗಾಗಿ ಭದ್ರತಾ ದಾಖಲೆಯನ್ನು ವಾದಿಯರಿಗೆ ಬರೆದುಕೊಟ್ಟಿರುತ್ತೇವೆ ಎಂದು ನುಡಿದಿರುತ್ತಾರೆ.

2. ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಯನ್ನು ಈಗ ನಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿ. ದಿನಾಂಕ 08.05.2019 ರಲ್ಲಿ ವಾದಿಯರು ನಮಗೆ ವಕೀಲರ ಮೂಲಕ ನೋಟಿಸನ್ನು ಕಳುಹಿಸಿರುತ್ತಾರೆ ಎಂದರೆ ಸರಿ. ವಾದಿಯರು ಕಳುಹಿಸಿದ್ದ ಸದರಿ ನೋಟಿಸಿಗೆ ನಮ್ಮ ವಕೀಲರ ಮೂಲಕ ನಾವು ಪ್ರತ್ಯುತ್ತರ ನೋಟಿಸನ್ನು ಕಳುಹಿಸಿರುತ್ತೇವೆ ಎಂದರೆ ಸರಿ. ವಾದಿಯರು ನಮ್ಮ ವಿರುದ್ಧ ದಾವೆಯ ಹೂಡುತ್ತಾರೆ ಎನ್ನುವ ಭಯದಿಂದ ನಾವೇ ಮೊದಲು ಅಸಲು ದಾವೆ ಸಂಖ್ಯೆ 303/2019 ರ ದಾವೆಯನ್ನು

ಕೆ.ಆರ್.ನಗರದ ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಹೂಡಿರುತ್ತೇವೆ ಎಂದರೆ ಸರಿ. ಅಸಲು ದಾವೆ ಸಂಖ್ಯೆ 303/2019 ರಲ್ಲಿ ನನ್ನ ಅಡ್ಡ ವಿಚಾರಣೆ ಆಗಿರುತ್ತದೆ ಎಂದರೆ ಸರಿ.

3. ದಾವಾ ಆಸ್ತಿಯು ನಮಗೆ ಆಶ್ರಯ ಯೋಜನೆಯ ಅಡಿಯಲ್ಲಿ ಸರಕಾರದಿಂದ ಮಂಜೂರಾದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 5 ನೇ ಕಂಡಿಕೆಯಲ್ಲಿ ನಮೂದಿಸಿರುವ ದಿನಾಂಕ 08.05.2000 ವರ್ಗಾವರ್ಗೀ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿಗೆ ಈಗ ನಿಪಿ.1 ರ ದಾಖಲೆಯನ್ನು ತೋರಿಸಿ ಸದರಿ ದಾಖಲೆಯನ್ನು ನೀವೇ ಬರೆದುಕೊಟ್ಟಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಅನಕ್ಷರಸ್ಥನಾಗಿದ್ದು, ನನಗೆ ಓದಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ.1 ರ ದಾಖಲೆಗೆ 1 ರಿಂದ 3 ನೇ ಪ್ರತಿವಾದಿಯರು ಹಾಗೂ ನಿಮ್ಮ ತಂದೆ ಸಹಿ ಮಾಡಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸಾಲದ ಭದ್ರತೆಗಾಗಿ ಭದ್ರತಾ ದಾಖಲೆಯನ್ನು ಮಾಡಿಸಿಕೊಡುವುದಾಗಿ ಹೇಳಿ ವಾದಿಯು ನಿಪಿ.1 ರ ದಾಖಲೆಗೆ ನಮ್ಮ ಸಹಿಯನ್ನು ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ.

4. ನಿಪಿ.2 ರಲ್ಲಿರುವ ನಾಡ ಹಂಚಿನ ಮನೆ ದಾವಾ ಆಸ್ತಿ ಎಂದರೆ ಸರಿ. ಸದರಿ ದಾವಾ ಆಸ್ತಿಯನ್ನು ನಾವು ವಾದಿಯರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯನ್ನು ವಾದಿಯರಿಗೆ ನಿಪಿ.1 ರಡಿಯಲ್ಲಿ ಮಾರಾಟ ಮಾಡಿದ್ದರು ಸಹ ಮೋಸದಿಂದ ದಾವಾ ಆಸ್ತಿಯ ಖಾತೆಯನ್ನು ನಮ್ಮ ಹೆಸರಿಗೆ ವರ್ಗಾವಣೆ ಮಾಡಿ ಸುಳ್ಳು ತಕರಾರನ್ನು ಸಲ್ಲಿಸಿ, ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**